# ಕರ್ನಾಟಕ ಸರ್ಕಾರ

ಸಂಖ್ಯೆ: ಆಇ 18 ಬಿಪಿಇ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನಸೌಧ,
ಬೆಂಗಳೂರು, ದಿನಾಂಕ:10-11-2020

## ಸುತ್ತೋಲೆ

ವಿಷಯ:-2021-22ನೇ ಸಾಲಿನ ಅನುಬಂಧ-ಬಿ-ವೇತನಗಳ ಅಂದಾಜುಗಳಿಗೆ ನಿಗಧಿಪಡಿಸಿದ ಕಾಲಮಿತಿಯನ್ನು ವಿಸ್ತರಿಸುವ ಬಗ್ಗೆ.

ಉಲ್ಲೇಖ: ಇದೇ ಸಮಸಂಖ್ಯೆಯ ಸುತ್ತೋಲೆ ದಿನಾಂಕ:12.10.2020.

********

2021-22ನೇ ಸಾಲಿನ ಅನುಬಂಧ-ಬಿ-ವೇತನಗಳ ಅಂದಾಜುಗಳಿಗೆ ಸಂಬಂಧಿಸಿದಂತೆ ಈಗಾಗಲೇ ಹೊರಡಿಸಿರುವ ಉಲ್ಲೇಖಿತ ಸುತ್ತೋಲೆಯ ಕಂಡಿಕೆ-2. **"ಆಡಳಿತ ಇಲಾಖೆಗಳ ಪಾತ್ರ"** ಇದರಡಿಯ ಉಪಕಂಡಿಕೆ (ಡಿ) ಯಲ್ಲಿ **2021-22ನೇ ಸಾಲಿಗೆ ಹುದ್ದೆಗಳು ಮತ್ತು ವೇತನಗಳಿಗೆ ಸಂಬಂಧಿಸಿದಂತೆ ಅಂದಾಜುಗಳನ್ನು/ವಿಶ್ಲೇಷಣೆಗಳನ್ನು ಮಾಡಲು HRMS-2 ಮೂಲಕ ಪಡೆಯಲಾಗುವ ಸಹಿಯಾಗಿರುವ ವರದಿಯನ್ನೇ ಅಧಿಕೃತವೆಂದು ಪರಿಗಣಿಸಿ ಸ್ವೀಕರಿಸಲಾಗುವುದು ಮತ್ತು ಅಂತಹ ವರದಿಯನ್ನು ಮಾತ್ರ ಆರ್ಥಿಕ ಇಲಾಖೆಯಲ್ಲಿ ಬಳಸಲಾಗುವುದು. ಧೃಢೀಕರಣ ಪತ್ರವನ್ನು ಸಲ್ಲಿಸಲು ದಿನಾಂಕ:07.11.2020 ಅಂತಿಮ ದಿನಾಂಕವಾಗಿರುತ್ತದೆ ಎಂದು ತಿಳಿಸಲಾಗಿತ್ತು.**

2. ಯೋಜನಾ ನಿರ್ದೇಶಕರು, HRMS-2 ರವರು ತಾಂತ್ರಿಕ ದೋಷಗಳ ಕಾರಣದಿಂದಾಗಿ ಮೇಲೆ ತಿಳಿಸಿದ ದಿನಾಂಕವನ್ನು ವಿಸ್ತರಿಸುವಂತೆ ತಿಳಿಸಿರುವ ಹಿನ್ನೆಲೆಯಲ್ಲಿ, HRMS 2.0 ರಲ್ಲಿ ಧೃಢೀಕರಣ ಪತ್ರವನ್ನು ಪಡೆದು ಸಲ್ಲಿಸಲು ಕಡೆಯ ದಿನಾಂಕ:30.11.2020 ರವರೆಗೆ ವಿಸ್ತರಿಸಲಾಗಿದೆ.

3. ಈ ಸುತ್ತೋಲೆಯನ್ನು ಆರ್ಥಿಕ ಇಲಾಖೆಯ ವೆಬ್‌ಸೈಟ್ ವಿಳಾಸ **www.finance.karnataka.gov.in** ನಿಂದ ಪಡೆಯಬಹುದಾಗಿದೆ.

Ekroop Caur 11/11
(ಏಕ್ ರೂಪ್ ಕೌರ್)
ಸರ್ಕಾರದ ಕಾರ್ಯದರ್ಶಿ(ಆ &ಸಂ)
ಆರ್ಥಿಕ ಇಲಾಖೆ.

ಇವರಿಗೆ:-

(1) ಪ್ರಧಾನ ಮಹಾಲೇಖಪಾಲರು(ಎ ಮತ್ತು ಇ),(ಜಿ ಮತ್ತು ಎಸ್‌ಎಸ್‌ಎ), (ಇ ಮತ್ತು ಆರ್‌ಎಸ್‌ಎ) ಕರ್ನಾಟಕ, ಬೆಂಗಳೂರು-1

(2) ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು,ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳು.

(3) ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ.

(4) ಕಾರ್ಯದರ್ಶಿ, ಕರ್ನಾಟಕ ವಿಧಾನ ಪರಿಷತ್.

(5) ಎಲ್ಲಾ ಇಲಾಖಾ ಮುಖ್ಯಸ್ಥರುಗಳು.

(6) ಯೋಜನಾ ನಿರ್ದೇಶಕರು, ಹೆಚ್.ಆರ್.ಎಂ.ಎಸ್. 2.0.

(7) ಎಲ್ಲಾ ಪ್ರಾದೇಶಿಕ ಆಯುಕ್ತರುಗಳು.

(8) ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.

(9) ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು.

(10) ಎಲ್ಲಾ ಆಂತರಿಕ ಆರ್ಥಿಕ ಸಲಹೆಗಾರರು.

(11) ಆರ್ಥಿಕ ಇಲಾಖೆಯ ಎಲ್ಲಾ ವಿಶೇಷ ಕಾರ್ಯದರ್ಶಿ/ಜಂಟಿ ಕಾರ್ಯದರ್ಶಿಗಳು/ಉಪ ಕಾರ್ಯದರ್ಶಿಗಳು/ಅಧೀನ ಕಾರ್ಯದರ್ಶಿಗಳು/ಶಾಖಾಧಿಕಾರಿಗಳು.

(12) ಕಛೇರಿ ಪ್ರತಿ/ ಹೆಚ್ಚುವರಿ ಪ್ರತಿಗಳು.